ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**
ಅಂತರ್ಜಾಲ : https://kptcl.karnataka.gov.in
ದೂರವಾಣಿ ಸಂಖ್ಯೆ : 080-22212343
ಇ–ಮೇಲ್ ವಿಳಾಸ : director.ahr.kptcl@gmail.com

**KPTCL/GMT/CIVL(B7)/35/2024-MANAGER ESTATE (E-106992)** 02 MAR 2024
(ಹಿಂದಿನ ಕಡತ ಸಂಖ್ಯೆ: ಕವಿಪ್ರನಿನಿ/ಬಿ7/4587/94-95)

# ಸುತ್ತೋಲೆ

ವಿಷಯ: ಕವಿಪ್ರನಿನಿಯಲ್ಲಿ ಕಾರ್ಯಗತಗೊಳಿಸುವ Contract Agreement ಇತ್ಯಾದಿ ದಸ್ತಾವೇಜುಗಳಿಗೆ ಪರಿಷ್ಕೃತ ಮುದ್ರಾಂಕ ಶುಲ್ಕ ಪಾವತಿಸುವ ಕುರಿತು

ಉಲ್ಲೇಖ:
1. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರ ಪತ್ರ ಸಂಖ್ಯೆ : 67-ಬಿ-09/2022-23 ದಿನಾಂಕ 23.06.2022
2. ಸುತ್ತೋಲೆ ಸಂಖ್ಯೆ : ಕವಿಪ್ರನಿನಿ/ಬಿ7/4587/94-95 ದಿನಾಂಕ 11.08.2022
3. ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ ಅಧಿಸೂಚನೆ ಸಂಖ್ಯೆ : ಸಂವ್ಯಶಾಇ 38 ಶಾಸನ 2023, ಬೆಂಗಳೂರು ದಿನಾಂಕ 03.02.2024 (ಕರ್ನಾಟಕ ರಾಜ್ಯ ಸರ್ಕಾರದ ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 2023)

**********

ಕವಿಪ್ರನಿನಿ ವ್ಯಾಪ್ತಿಯಲ್ಲಿ ಕಾರ್ಯಗತಗೊಳಿಸುವ Contract Agreement ಇತ್ಯಾದಿ ದಸ್ತಾವೇಜುಗಳಿಗೆ ಕರ್ನಾಟಕ ಸ್ಟಾಂಪು ಅಧಿನಿಯಮ 1957 ಮತ್ತು ಉಲ್ಲೇಖ (3) ರಲ್ಲಿನ ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 2023 ರನ್ವಯ ಪಾವತಿಸಬೇಕಾದ ಪರಿಷ್ಕೃತ ಮುದ್ರಾಂಕ ಶುಲ್ಕದ ವಿವರ ಕೆಳಕಂಡಂತಿದೆ.

| Sl. No. | Aricle No. | Description of Instruments | Stamp Duty | |
|---|---|---|---|---|
| | | | As per the KPTCL Circular dated 11.08.2022 | As per the GoK Notification dated 03.02.2024 |
| 1 | 5 | Agreement or its records or Memorandum of Agreement | | |
| | (i-d) | If relating to Building Works or Labour or Services (Works Contract) | | |
| | | (i) Where the amount or consideration in the agreement does not exceed Rs. Ten Lakhs | Rs. **One hundred** | Rs. **Five hundred** |
| | | (ii) Where the amount or consideration in the agreement exceeds Rs. Ten Lakhs | Rs. **One hundred** and in addition Rs. **One hundred** for every Rs. Ten Lakhs or part thereof in excess of Rs. Ten Lakhs subject to maximum of Rs. **Five Lakhs** | Rs. **Five hundred** and in addition Rs. **Five hundred** for every Rs. Ten lakhs or part thereof in excess of Rs. Ten Lakhs, subject to maximum of Rs. **Ten Lakhs** |
| 2 | 29 | Indemnity Bond | Rs. **Two hundred** | Rs. **Five hundred** |

ಈ ಸಂಬಂಧ, ಕವಿಪ್ರನಿನಿಯ ಎಲ್ಲಾ Contract Agreement ಇತ್ಯಾದಿ ದಸ್ತಾವೇಜುಗಳಿಗೆ ಕರ್ನಾಟಕ ಸ್ಟ್ಯಾಂಪು ಅಧಿನಿಯಮ 1957 ಮತ್ತು ಉಲ್ಲೇಖ (3) ರನ್ವಯ (ಪ್ರತಿ ಲಗತ್ತಿಸಿದೆ) ಪರಿಷ್ಕೃತ ಮುದ್ರಾಂಕ ಶುಲ್ಕವನ್ನು ಪಾವತಿಸಿ ದಸ್ತಾವೇಜುಗಳನ್ನು ಕಾರ್ಯಗತಗೊಳಿಸುವುದು. ಇತರೆ ಪ್ರಕರಣಗಳಿಗೆ ಸಂಬಂಧಿಸಿದಂತೆ, ಉಲ್ಲೇಖ (3) ರ ಅಧಿಸೂಚನೆಯನ್ವಯ ಅನುಸರಿಸುವುದು ಮತ್ತು ಮುದ್ರಾಂಕ ಶುಲ್ಕದ ಬಗ್ಗೆ ಹೆಚ್ಚಿನ ಮಾಹಿತಿ / ವಿವರಣೆ ಅಗತ್ಯವಿದ್ದಲ್ಲಿ, ಸ್ಥಳೀಯ ಉಪನೋಂದಣಾಧಿಕಾರಿ / ಜಿಲ್ಲಾ ನೋಂದಣಾಧಿಕಾರಿಗಳು / ಕೇಂದ್ರ ಕಛೇರಿಯನ್ನು ಸಂಪರ್ಕಿಸಲು ಸೂಚಿಸಿದೆ.

ಮುಂದುವರೆದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಘನ ಸರ್ಕಾರದಿಂದ ಹೊರಡಿಸಿರುವ ಉಲ್ಲೇಖ (3) ರಲ್ಲಿನ ಅಧಿಸೂಚನೆಯನ್ನು ನಿಗಮದಲ್ಲಿ ಅಳವಡಿಸಿಕೊಳ್ಳಲು ಸೂಚಿಸಿದೆ.

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ, ಬೆಂಗಳೂರು.

**<u>ಪ್ರತಿಗಳು</u>**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ
3. ಉಪ-ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ) / (ಕಾನೂನು) / (ಯೋಜನೆ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ
6. ಅಧೀಕ್ಷಕ ಇಂಜಿನಿಯರ್ (ವಿ), (ಐ.ಟಿ.), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು – ಸದರಿ ಸುತ್ತೋಲೆಯನ್ನು ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸುವುದು.
7. ಎಲ್ಲಾ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ
9. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ
10. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ) / (ಹಣಕಾಸು) / (ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
11. ಎಲ್ಲ ಲೆಕ್ಕಾಧಿಕಾರಿಗಳು, ಕವಿಪ್ರನಿನಿ
12. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ
13. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

## 2024ರ ಕರ್ನಾಟಕ ಅಧಿನಿಯಮ ಸಂಖ್ಯೆ: 04

(2024 ರ ಫೆಬ್ರುವರಿ ತಿಂಗಳ 03 ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 2023

(2024 ರ ಫೆಬ್ರುವರಿ ತಿಂಗಳ 03 ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34) ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 30ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 30ನೇ ಪ್ರಕರಣದಲ್ಲಿನ (ಎ) ಖಂಡದ ಅನುಚ್ಛೇದ ಸಂ. [52] (ಬಿ) ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಸಂ. [52] (ಬಿ) (ಬಂಧಪತ್ರ, ಅಡಮಾನ ಪತ್ರ ಅಥವಾ ವಿಮಾ ಪಾಲಿಸಿಯ ಮೂಲಕ ಭದ್ರತೆಗೊಳಿಸಿದ ಯಾವುದೇ ಹಿತಾಸಕ್ತಿಯ ವರ್ಗಾವಣೆ)

ಸಂ. [56] (ಪೇಪರ್ ಬ್ಯಾಂಕ್ ಗ್ಯಾರಂಟಿ ಮತ್ತು ಇ-ಬ್ಯಾಂಕ್ ಗ್ಯಾರಂಟಿಗೆ ಸಂಬಂಧಿಸಿದ್ದಲ್ಲಿ).-"

**3. ಅನುಸೂಚಿಯ ತಿದ್ದುಪಡಿ.-** ಮೂಲ ಅಧಿನಿಯಮದಲ್ಲಿನ ಅನುಸೂಚಿಯಲ್ಲಿ,-

(i) 3ನೇ ಅನುಚ್ಛೇದದ (3)ನೇ ಕಾಲಂನಲ್ಲಿ "ಐದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) 4ನೇ ಅನುಚ್ಛೇದದ (3)ನೇ ಕಾಲಂನಲ್ಲಿ "ಇಪ್ಪತ್ತು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಒಂದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) 5ನೇ ಅನುಚ್ಛೇದದಲ್ಲಿ,-

(ಎ) ಖಂಡ (ಬಿ) ಯಲ್ಲಿನ (3)ನೇ ಕಾಲಂನಲ್ಲಿ "ಗರಿಷ್ಟ ಒಂದು ಸಾವಿರ ರೂಪಾಯಿಗಳಿಗೆ ಒಳಪಟ್ಟು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) ಖಂಡ (ಇ) ಯಲ್ಲಿನ ಉಪಖಂಡ (ii)ನಲ್ಲಿನ (3)ನೇ ಕಾಲಂನಲ್ಲಿ "ಹತ್ತು ಪೈಸೆ" ಎಂಬ ಪದಗಳ ಬದಲಿಗೆ "ಐವತ್ತು ಪೈಸೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು "ಇಪ್ಪತ್ತು ಸಾವಿರ ರೂಪಾಯಿಗಳ ಗರಿಷ್ಟ ಆದರೆ ಐದು ನೂರು ರೂಪಾಯಿಗಳಿಗೆ ಕಡಿಮೆ ಇಲ್ಲದುದಕ್ಕೆ ಒಳಪಟ್ಟು" ಎಂಬ ಪದಗಳ ಬದಲಾಗಿ "ಆದರೆ ಐದು ನೂರು ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಖಂಡ (ಐ-ಡಿ) ಯಲ್ಲಿ,-

(i) ಉಪಖಂಡ (i) ರಲ್ಲಿನ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) ಉಪಖಂಡ (ii) ರಲ್ಲಿ (3)ನೇ ಕಾಲಂನಲ್ಲಿನ ನಮೂದುಗಳ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಐದು ನೂರು ರೂಪಾಯಿಗಳು ಮತ್ತು ಪ್ರತಿ ಹತ್ತು ಲಕ್ಷ ರೂಪಾಯಿಗಳಿಗೆ ಅಥವಾ ಹತ್ತು ಲಕ್ಷ ರೂಪಾಯಿಗಳನ್ನು ಮೀರಿದ ಅದರ ಭಾಗಕ್ಕೆ, ಗರಿಷ್ಠ ಹತ್ತು ಲಕ್ಷ ರೂಪಾಯಿಗಳಿಗೆ ಒಳಪಟ್ಟು, ಹೆಚ್ಚುವರಿಯಾಗಿ ಐದು ನೂರು ರೂಪಾಯಿಗಳು.".

(ಡಿ) ಖಂಡ (ಐ-ಇ) ಯಲ್ಲಿ,-

(i) ಉಪಖಂಡ (i) ರಲ್ಲಿನ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) ಉಪಖಂಡ (ii) ರಲ್ಲಿ (3)ನೇ ಕಾಲಂನಲ್ಲಿನ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಐದು ನೂರು ರೂಪಾಯಿಗಳು ಜೊತೆಗೆ ಒಂದು ಲಕ್ಷ ರೂಪಾಯಿಗಳನ್ನು ಮೀರಿದ ಪ್ರತಿ ಒಂದು ಲಕ್ಷ ರೂಪಾಯಿ ಅಥವಾ ಅದರ ಭಾಗಕ್ಕೆ ಒಂದು ನೂರು ರೂಪಾಯಿಗಳು.".

(ಇ) ಖಂಡ (ಜೆ) ಯಲ್ಲಿನ (3)ನೇ ಕಾಲಂನಲ್ಲಿ "ಎರಡು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iv) 6ನೇ ಅನುಚ್ಛೇದದಲ್ಲಿ,-

(ಎ) ಖಂಡ (1) ರಲ್ಲಿ,-

(i) ಉಪಖಂಡ (i) ರಲ್ಲಿನ (3)ನೇ ಕಾಲಂನಲ್ಲಿ "ಶೇ.0.1" ಎಂಬ ಪದ ಮತ್ತು ಅಂಕಿಗಳ ಬದಲಿಗೆ "ಶೇ.0.5" ಎಂಬ ಪದ ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) ಉಪಖಂಡ (ii) ರಲ್ಲಿ (3)ನೇ ಕಾಲಂನಲ್ಲಿನ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಸಾಲ ಅಥವಾ ಋಣದ ಮೊತ್ತದ ಶೇ.0.5";

(ಬಿ) ಖಂಡ (2) ರಲ್ಲಿ,-

(i) ಉಪಖಂಡ (i) ರಲ್ಲಿನ (3)ನೇ ಕಾಲಂನಲ್ಲಿ "ಶೇ.0.1" ಎಂಬ ಪದ ಮತ್ತು ಅಂಕಿಗಳ ಬದಲಿಗೆ "ಶೇ.0.5" ಎಂಬ ಪದ ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) ಉಪಖಂಡ (ii) ರಲ್ಲಿ (3)ನೇ ಕಾಲಂನಲ್ಲಿನ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಸಾಲ ಅಥವಾ ಋಣದ ಮೊತ್ತದ ಶೇ.0.5";

(v) 8ನೇ ಅನುಚ್ಛೇದದ (ಬಿ) ಖಂಡದಲ್ಲಿನ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಎರಡು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(vi) 10ನೇ ಅನುಚ್ಛೇದದ (3)ನೇ ಕಾಲಂನಲ್ಲಿನ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಗರಿಷ್ಠ ಒಂದು ಕೋಟಿ ರೂಪಾಯಿಗಳಿಗೆ ಒಳಪಟ್ಟು ಪ್ರತಿ ಹತ್ತು ಲಕ್ಷ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಐದು ಸಾವಿರ ರೂಪಾಯಿಗಳು".

(vii) 11ನೇ ಅನುಚ್ಛೇದದ (ಬಿ) ಖಂಡದಲ್ಲಿ,-

(ಎ) ಉಪಖಂಡ (i) ರಲ್ಲಿನ (3)ನೇ ಕಾಲಂನಲ್ಲಿ "ಮೊತ್ತದ ಅಥವಾ ಮಾರುಕಟ್ಟೆ ಮೌಲ್ಯದ ಮೇಲೆ ಶೇಕಡಾ 3/4ರಂತೆ" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ "ಮೊತ್ತದ ಅಥವಾ ಮಾರುಕಟ್ಟೆ ಮೌಲ್ಯದ ಮೇಲೆ ಶೇಕಡಾ 1ರಂತೆ" ಎಂಬ ಪದಗಳು ಮತ್ತು ಅಂಕಿಯನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಉಪಖಂಡ (ii) ರಲ್ಲಿ (3)ನೇ ಕಾಲಂನಲ್ಲಿನ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಮೊತ್ತದ ಅಥವಾ ಮಾರುಕಟ್ಟೆ ಮೌಲ್ಯದ ಮೇಲೆ ಶೇಕಡಾ 1ರಂತೆ"; ಮತ್ತು

(ಸಿ) ಉಪಖಂಡ (iii) ರಲ್ಲಿ (3)ನೇ ಕಾಲಂನಲ್ಲಿನ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಮೊತ್ತದ ಅಥವಾ ಮಾರುಕಟ್ಟೆ ಮೌಲ್ಯದ ಮೇಲೆ ಶೇಕಡಾ 1ರಂತೆ".

(viii) 12ನೇ ಅನುಚ್ಛೇದದಲ್ಲಿ,-

(ಎ) ಖಂಡ (ಎ) ರಲ್ಲಿ (3)ನೇ ಕಾಲಂನಲ್ಲಿನ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಕನಿಷ್ಠ ಒಂದು ನೂರು ರೂಪಾಯಿಗಳಿಗೆ ಒಳಪಟ್ಟು ಪ್ರತಿ ಒಂದು ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಎರಡು ರೂಪಾಯಿ."; ಮತ್ತು

(ಬಿ) ಖಂಡ (ಬಿ) ರಲ್ಲಿ (3)ನೇ ಕಾಲಂನಲ್ಲಿನ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಕನಿಷ್ಠ ಒಂದು ನೂರು ರೂಪಾಯಿಗಳಿಗೆ ಒಳಪಟ್ಟು ಪ್ರತಿ ಒಂದು ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಎರಡು ರೂಪಾಯಿ."

(ix) 14ನೇ ಅನುಚ್ಛೇದದಲ್ಲಿ,-

(ಎ) ಖಂಡ (ಬಿ) ಯಲ್ಲಿನ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಖಂಡ (ಸಿ) ಯಲ್ಲಿನ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(x) 17ನೇ ಅನುಚ್ಛೇದದಲ್ಲಿನ (3)ನೇ ಕಾಲಂನಲ್ಲಿ "ಐದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಎರಡು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xi) 19ನೇ ಅನುಚ್ಛೇದದಲ್ಲಿನ (3)ನೇ ಕಾಲಂನಲ್ಲಿ "ಎರಡು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xii) 20ನೇ ಅನುಚ್ಛೇದದಲ್ಲಿನ,-

(ಎ) ಖಂಡ (4)ರಲ್ಲಿ,-

(i) ಉಪಖಂಡ (i) ರಲ್ಲಿನ (3)ನೇ ಕಾಲಂನಲ್ಲಿ "ಶೇಕಡಾ ಮೂರರಷ್ಟು" ಎಂಬ ಪದಗಳ ಬದಲಿಗೆ "ಶೇಕಡಾ ಐದರಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು "ಶೇಕಡ ಒಂದಕ್ಕೆ ಸಮನಾದ ಮೊಬಲಗು" ಎಂಬ ಪದಗಳ ಬದಲಾಗಿ "ಶೇಕಡ ಐದಕ್ಕೆ ಸಮನಾದ ಮೊಬಲಗು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) ಉಪಖಂಡ (ii) ರಲ್ಲಿನ (3)ನೇ ಕಾಲಂನಲ್ಲಿ "ಶೇಕಡಾ ಮೂರರಷ್ಟು" ಎಂಬ ಪದಗಳ ಬದಲಿಗೆ "ಶೇಕಡಾ ಐದರಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು "ಶೇಕಡ ಒಂದಕ್ಕೆ ಸಮನಾದ ಮೊಬಲಗು" ಎಂಬ ಪದಗಳ ಬದಲಾಗಿ "ಶೇಕಡ ಐದಕ್ಕೆ ಸಮನಾದ ಮೊಬಲಗು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) (6)ನೇ ಖಂಡದಲ್ಲಿ, (3)ನೇ ಕಾಲಂನಲ್ಲಿನ ನಮೂದುಗಳ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಗರಿಷ್ಟ ಐದು ಲಕ್ಷ ರೂಪಾಯಿಗಳಿಗೆ ಒಳಪಟ್ಟು ಪ್ರತಿ ಒಂದು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಎರಡು ರೂಪಾಯಿ";

(ಸಿ) (7)ನೇ ಖಂಡದಲ್ಲಿನ (3)ನೇ ಕಾಲಂನಲ್ಲಿ "ಶೇಕಡಾ ಮೂರರಷ್ಟು" ಎಂಬ ಪದಗಳ ಬದಲಿಗೆ "ಶೇಕಡಾ ಐದರಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xiii) 21ನೇ ಅನುಚ್ಛೇದದಲ್ಲಿ,-

(ಎ) ಖಂಡ (i) ರಲ್ಲಿನ (3)ನೇ ಕಾಲಂನಲ್ಲಿ "ಐದು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಇಪ್ಪತ್ತು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಖಂಡ (ii) ರಲ್ಲಿನ (3)ನೇ ಕಾಲಂನಲ್ಲಿ "ಹತ್ತು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐವತ್ತು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xiv) 22ನೇ ಅನುಚ್ಛೇದದಲ್ಲಿನ (ಬಿ) ಖಂಡದ (3)ನೇ ಕಾಲಂನಲ್ಲಿ "ಐದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xv) 25ನೇ ಅನುಚ್ಛೇದದಲ್ಲಿನ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xvi) 31ನೇ ಅನುಚ್ಛೇದದಲ್ಲಿನ (3)ನೇ ಕಾಲಂನಲ್ಲಿ "ಒಂದು ರೂಪಾಯಿ" ಎಂಬ ಪದಗಳ ಬದಲಿಗೆ "ಹತ್ತು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xvii) 33ನೇ ಅನುಚ್ಛೇದದಲ್ಲಿನ (ಎ) ಖಂಡದ (3)ನೇ ಕಾಲಂನಲ್ಲಿ "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xviii) 34ನೇ ಅನುಚ್ಛೇದದಲ್ಲಿನ,-

(ಎ) ಖಂಡ (ಸಿ)ಯಲ್ಲಿ,-

(i) ಉಪಖಂಡ (i) ರಲ್ಲಿನ (3)ನೇ ಕಾಲಂನಲ್ಲಿ "ಹತ್ತು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐವತ್ತು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಉಪಖಂಡ (ii) ರಲ್ಲಿ (3)ನೇ ಕಾಲಂನಲ್ಲಿನ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಐವತ್ತು ರೂಪಾಯಿಗಳು ಹಾಗೂ ಪ್ರತೀ ಒಂದು ಸಾವಿರ ರೂಪಾಯಿಗಳಿಗೆ ಅಥವಾ ಒಂದು ಸಾವಿರ ರೂಪಾಯಿಗಳನ್ನು ಮೀರಿದ ಅದರ ಭಾಗಕ್ಕೆ ಐದು ರೂಪಾಯಿಗಳು"

(ಬಿ) ಖಂಡ (ಡಿ)ಯಲ್ಲಿನ,-

(i) ಉಪಖಂಡ (i) ರಲ್ಲಿ (3)ನೇ ಕಾಲಂನಲ್ಲಿನ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಐವತ್ತು ರೂಪಾಯಿಗಳು"; ಮತ್ತು

(ii) ಉಪಖಂಡ (ii) ರಲ್ಲಿ (3)ನೇ ಕಾಲಂನಲ್ಲಿನ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪ್ರತಿ ಹತ್ತು ಸಾವಿರ ರೂಪಾಯಿಗಳು ಅಥವಾ ಅದರ ಭಾಗಕ್ಕೆ ಐವತ್ತು ರೂಪಾಯಿಗಳು";

(xix) 39ನೇ ಅನುಚ್ಛೇದದಲ್ಲಿನ,-

(ಎ) ಖಂಡ (ಎ)ಯಲ್ಲಿ,-

(i) ಉಪಖಂಡ (1) ರಲ್ಲಿನ (3)ನೇ ಕಾಲಂನಲ್ಲಿ "ಅಂಥ ಪ್ರತಿಯೊಂದು ಪಾಲಿಗೆ ಒಂದು ಸಾವಿರ ರೂಪಾಯಿಗಳು" ಎಂಬ ಪದಗಳ ಬದಲಿಗೆ "ಅಂಥ ಪ್ರತಿಯೊಂದು ಪಾಲಿಗೆ ಐದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಉಪಖಂಡ (2) ರಲ್ಲಿನ (3)ನೇ ಕಾಲಂನಲ್ಲಿ "ಅಂಥ ಪ್ರತಿಯೊಂದು ಪಾಲಿಗೆ ಐದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಅಂಥ ಪ್ರತಿಯೊಂದು ಪಾಲಿಗೆ ಮೂರು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಖಂಡ (ಬಿ) ರಲ್ಲಿನ (3)ನೇ ಕಾಲಂನಲ್ಲಿ "ಅಂಥ ಪ್ರತಿಯೊಂದು ಪಾಲಿಗೆ ಎರಡು ನೂರ ಐವತ್ತು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಅಂಥ ಪ್ರತಿಯೊಂದು ಪಾಲಿಗೆ ಒಂದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಸಿ) ಖಂಡ (ಸಿ) ರಲ್ಲಿನ (3)ನೇ ಕಾಲಂನಲ್ಲಿ "ಅಂಥ ಪ್ರತಿಯೊಂದು ಪಾಲಿಗೆ ಎರಡು ನೂರ ಐವತ್ತು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಅಂಥ ಪ್ರತಿಯೊಂದು ಪಾಲಿಗೆ ಒಂದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xx) 40ನೇ ಅನುಚ್ಛೇದದಲ್ಲಿನ,-

(ಎ) ಖಂಡ (ಬಿ) ರಲ್ಲಿನ ಉಪಖಂಡ (ಎ)ರ (3)ನೇ ಕಾಲಂನಲ್ಲಿ "ಶೇಕಡಾ ಮೂರರಷ್ಟು" ಎಂಬ ಪದಗಳ ಬದಲಿಗೆ "ಶೇಕಡಾ ಐದರಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಖಂಡ (ಬಿ) ರಲ್ಲಿನ ಉಪಖಂಡ (ಬಿ)ರ (3)ನೇ ಕಾಲಂನಲ್ಲಿ "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳ ಬದಲಿಗೆ "ಎರಡು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಖಂಡ (ಸಿ) ರಲ್ಲಿನ ಉಪಖಂಡ (ಎ)ರ (3)ನೇ ಕಾಲಂನಲ್ಲಿ "ಶೇಕಡಾ ಮೂರರಷ್ಟು" ಎಂಬ ಪದಗಳ ಬದಲಿಗೆ "ಶೇಕಡಾ ಐದರಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಡಿ) ಖಂಡ (ಸಿ) ರಲ್ಲಿನ ಉಪಖಂಡ (ಬಿ)ರ (3)ನೇ ಕಾಲಂನಲ್ಲಿ "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳ ಬದಲಿಗೆ "ಎರಡು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxi) 40-ಎ ಅನುಚ್ಛೇದದಲ್ಲಿ,-

(ಎ) ಖಂಡ (ಎ) ರಲ್ಲಿನ,-

(i) ಉಪಖಂಡ (ಎ)ರ (3)ನೇ ಕಾಲಂನಲ್ಲಿ "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಉಪಖಂಡ (ಬಿ)ರ (3)ನೇ ಕಾಲಂನಲ್ಲಿನ ನಮೂದುಗಳ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಐದು ಸಾವಿರ ರೂಪಾಯಿಗಳು ಮತ್ತು ಗರಿಷ್ಠ ಇಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಒಳಪಟ್ಟು, ಹತ್ತು ಲಕ್ಷ ರೂಪಾಯಿಗಳ ಬಂಡವಾಳ ಮೊತ್ತವನ್ನು ಮೀರಿದ ಪ್ರತಿ ಐದು ಲಕ್ಷ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ಸಾವಿರ ರೂಪಾಯಿಗಳು"; ಮತ್ತು

(ಬಿ) ಖಂಡ (ಬಿ) ರಲ್ಲಿನ (3)ನೇ ಕಾಲಂನಲ್ಲಿ "ಶೇಕಡ ಮೂರು" ಎಂಬ ಪದಗಳ ಬದಲಿಗೆ
"ಶೇಕಡ ಐದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxii) 41ನೇ ಅನುಚ್ಛೇದದಲ್ಲಿನ,-

(ಎ) ಖಂಡ (ಎ) ರಲ್ಲಿನ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಖಂಡ (ಬಿ) ರಲ್ಲಿನ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಖಂಡ (ಸಿ) ರಲ್ಲಿನ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಡಿ) ಖಂಡ (ಡಿ) ರಲ್ಲಿನ (3)ನೇ ಕಾಲಂನಲ್ಲಿ "ಎರಡು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಇ) ಖಂಡ (ಎಫ್) ರಲ್ಲಿನ (3)ನೇ ಕಾಲಂನಲ್ಲಿ "ಐವತ್ತು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಒಂದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಎಫ್) ಖಂಡ (ಜಿ) ರಲ್ಲಿನ (3)ನೇ ಕಾಲಂನಲ್ಲಿ "ಐವತ್ತು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಒಂದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಜಿ) ಖಂಡ (ಎಚ್) ರಲ್ಲಿನ (3)ನೇ ಕಾಲಂನಲ್ಲಿ "ಎರಡು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xxiii) 44ನೇ ಅನುಚ್ಛೇದದಲ್ಲಿನ (ಬಿ) ಖಂಡದ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಎರಡು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xxiv) 45ನೇ ಅನುಚ್ಛೇದದಲ್ಲಿನ (ಸಿ) ಖಂಡದ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳಿಗೆ" ಎಂಬ ಪದಗಳ ಬದಲಿಗೆ "ಎರಡು ನೂರು ರೂಪಾಯಿಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xxv) 47ನೇ ಅನುಚ್ಛೇದದಲ್ಲಿನ,-

(ಎ) ಖಂಡ (ಎ) ರಲ್ಲಿನ (3)ನೇ ಕಾಲಂನಲ್ಲಿ "ಐವತ್ತು ಪೈಸೆ" ಎಂಬ ಪದಗಳ ಬದಲಿಗೆ "ಎರಡು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಖಂಡ (ಬಿ) ರಲ್ಲಿನ (3)ನೇ ಕಾಲಂನಲ್ಲಿ "ಎರಡು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xxvi) 51ನೇ ಅನುಚ್ಛೇದದಲ್ಲಿನ್ನ (ಬಿ) ಖಂಡದ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಎರಡು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xxvii) 52ನೇ ಅನುಚ್ಛೇದದಲ್ಲಿ,-

(ಎ) ಖಂಡ (ಬಿ) ರಲ್ಲಿನ ಉಪಖಂಡ (ii)ರ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಎರಡು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಖಂಡ (ಸಿ) ರಲ್ಲಿನ (3)ನೇ ಕಾಲಂನಲ್ಲಿ "ಒಂದು ನೂರು ರೂಪಾಯಿಗಳು" ಎಂಬ ಪದಗಳ ಬದಲಿಗೆ "ಎರಡು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xxviii) 54ನೇ ಅನುಚ್ಛೇದದಲ್ಲಿನ,-

(ಎ) ಖಂಡ (i) ರಲ್ಲಿನ (3)ನೇ ಕಾಲಂನಲ್ಲಿ "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳ ಬದಲಿಗೆ "ಎರಡು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಖಂಡ (ii) ರಲ್ಲಿನ (3)ನೇ ಕಾಲಂನಲ್ಲಿ "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳ ಬದಲಿಗೆ "ಎರಡು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xxix) 55ನೇ ಅನುಚ್ಛೇದದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"56. ಬ್ಯಾಂಕ್ ಗ್ಯಾರಂಟಿಗೆ ಸಂಬಂಧಪಟ್ಟಿದ್ದಲ್ಲಿ,-**

| | |
|---|---|
| (i) ಪೇಪರ್ ಬ್ಯಾಂಕ್ ಗ್ಯಾರಂಟಿಗೆ ಸಂಬಂಧಿಸಿರುವಲ್ಲಿ | ಮೂರು ನೂರು ರೂಪಾಯಿಗಳು |
| (ii) ಇ-ಬ್ಯಾಂಕ್ ಗ್ಯಾರಂಟಿಗೆ ಸಂಬಂಧಿಸಿರುವಲ್ಲಿ | ಎರಡು ನೂರು ರೂಪಾಯಿಗಳು |

The above translation of the Karnataka Stamp (Amendment) Act, 2023 (Karnataka Act 04 of 2024) shall be authoritative text in Kannada language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಜಿ. ಶ್ರೀಧರ್)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**KARNATAKA ACT NO. 04 OF 2024**

(First Published in the Karnataka Gazette Extra-ordinary on the 3rd day of February, 2024)

# THE KARNATAKA STAMP (AMENDMENT) ACT, 2023

(Received the assent of the Governor on the 3rd day of February, 2024)

An Act further to amend the Karnataka Stamp Act, 1957.

Whereas it is expedient further to amend the Karnataka Stamp Act, 1957(Karnataka Act 34 of 1957) for the purposes herein after appearing;

Be it enacted by the Karnataka State Legislature in the Seventy fourth yearof the Republic India as follows:-

**1. Short title and commencement.-** (1) This Act may be called the KarnatakaStamp (Amendment) Act, 2023.

(2) It shall come into force at once.

**2. Amendment of section 30.-** In the Karnataka Stamp Act, 1957, (Karnataka Act 34 of 1957) (hereinafter referred to as the Principal Act) in section 30, in clause (a), for Article No. [52] (b) and the entries relating thereto, the following shall be substituted, namely:-

"No. [52] (b) (Transfer of any interest secured by a bond, mortgage deed or policy of insurance),

No. [56] (if relating to paper bank guarantee and e-bank guarantee).-"

**3. Amendment of the Schedule.-** In the Principal Act, in the Schedule,-

(i) in Article 3, in column (3), for the words "five hundred rupees", the words "one thousand rupees" shall be substituted.

(ii) in Article 4, in column (3), for the words "twenty rupees", the words "Onehundred rupees" shall be substituted.

(iii) in Article 5,-

(a) in clause (b), in column (3), the words "subject to a maximum of rupees one thousand" shall be omitted;

(b) in clause (e), in sub-clause (ii), in column (3), for the words, "ten paise", the words, "fifty paise" shall be substituted, and for the words "subject to a maximum of rupees twenty thousand but not less than rupees Five hundred", the words "but not less than rupees Five hundred" shall be substituted;

(c) in clause (i-d),-

(i) in sub-clause (i), in column (3), for the words, "Rupees One hundred", the words "Rupees Five hundred" shall be substituted; and

(ii) in sub-clause (ii) for the entries in column (3), the the following shall be substituted, namely:-

"Rupees Five hundred and in addition Rupees Five hundred for every Rupees ten lakhs or part thereof in excess of Rupees ten lakhs, subject to a maximum of Rupees Ten lakhs.";

(d) in clause (i-e),-

(i) in sub-clause (i), in column (3), for the words, "Rupees One hundred", the words, "Rupees Five hundred" shall be substituted; and

(ii) in sub-clause (ii)), for the entries in column (3), the following shall be substituted, namely:-

"Rupees Five hundred plus rupees hundred for every rupees one lakh or part thereof, in excess of rupees one lakh."

(e) in clause (j), in column (3), for the words, "two hundred rupees" the words, "five hundred rupees" shall be substituted.

(iv) in Article 6,-

(a) in clause (1),-

(i) in sub-clause (i), in column (3), for the figures and words, "0.1 percent", the figures and words "0.5 percent", shall be substituted;

(ii) in sub-clause (ii), for the entries in column (3), the following shall be substituted, namely:-

"0.5 percent of the loan or debt amount";

(b) in clause (2),-

(i) in sub-clause (i) in column (3), for the figures and words, "0.1 percent", the figures and words "0.5 percent", shall be substituted; and

(ii) in sub-clause (ii)), for the entries in column (3), the following shall be substituted, namely:-

"0.5 percent on the loan or debt amount".

(v) in Article 8, in clause (b), in column (3) of, for the words "one hundred rupees", the words "two hundred rupees" shall be substituted.

(vi) In Article 10, for the entries in column (3), the following shall be substituted, namely:-

"Rupees Five thousand for every rupees ten lakhs or part thereof subject toa maximum of rupees One Crore."

(vii) In Article 11, in clause (b),-

(a) in sub-clause (i), in column (3), for the words and figures "3/4 % of the amount or market value", the words and figures "1 % of the amount or market value.", shall be substituted;

(b) in sub-clause (ii), for the entries in column (3), the following shall be substituted, namely:-

"1 % of the amount or market value."; and

(c) in sub-clause (iii), for the entries in column (3), the following shall be substituted, namely:-

"1 % of the amount or market value."

(viii) in Article 12,-

(a) in clause (a), for the entries in column (3), the following shall be substituted, namely:-

"Two Rupee for every one hundred rupees or part thereof subject to minimum of rupees one hundred."; and

(b) in clause (b), for the entries in column (3), the following shall be substituted, namely:-

"Two Rupee for every one hundred rupees or part thereof subject to minimum of rupees one hundred."

(ix) in Article 14,-

(a) in clause (b), in column (3), for the words, "One hundred rupees.", the words "Five hundred rupees", shall be substituted; and

(b) in clause (c), in column (3), for the words, "One hundred rupees.", the words, "Five hundred rupees", shall be substituted.

(x) in Article 17, in column (3), for the words "Five hundred rupees.",the words, "Two thousand rupees", shall be substituted.

(xi) in Article 19, in column (3), for the words "Two hundred rupees.",the words "Five hundred rupees", shall be substituted.

(xii) in Article 20,-

(a) in clause (4),-

(i) in sub-clause (i), in column (3), for the words, "three percent", the words, "five percent" shall be substituted and for the words "An amount equal to one per cent", the

words, "An amount equal to five per cent", shall be substituted; and

(ii) in sub-clause (ii) in column (3), for the words, "three percent", the words "five percent" shall be substituted, and for the words, "An amount equal to one per cent", the words, "An amount equal to five per cent", shall be substituted;

(b) in clause (6), for the entries in column (3), the following shall be substituted, namely:-

"Two rupee for every one thousand rupees or part thereof subject to a maximum of rupees five lakhs.";

(c) in clause (7), in column (3), for the words "three percent", the words "five percent", shall be substituted.

(xiii) in Article 21,-

(a) in clause (i), in column (3), for the words, "five rupees", the words, "twenty rupees" shall be substituted; and

(b) in clause (ii), in column (3), for the words, "ten rupees", the words, "fifty rupees", shall be substituted.

(xiv) in Article 22, in clause (b), in column (3), for the words "five hundred rupees", the words, "one thousand rupees", shall be substituted.

(xv) in Article 25, in column (3), for the words "one hundred rupees", the words "five hundred rupees" shall be substituted.

(xvi) in Article 31, in column (3), for the words "one rupee", the words "ten rupees" shall be substituted.

(xvii) in Article 33, in clause (a), in column (3), for the words "One thousand rupees", the words, "Five thousand rupees", shall be substituted.

(xviii) in Article 34,-

(a) in clause (c),-

(i) in sub-clause (i), in column (3), for the words "ten rupees", the words "fifty rupees", shall be substituted;

(ii) in sub-clause (ii), for the entries in column (3), the following shall be substituted, namely:-

"Fifty rupees plus five rupees for every rupees one thousand or part thereof in excess of rupees one thousand.";

(b) in clause (d),-

(i) in sub-clause (i), for the entries in column (3), the following shall be substituted, namely:-

"Rupees fifty for every rupees ten thousand or part thereof."; and

(ii) in sub-clause (ii), for the entries in column (3), the following shall be substituted, namely:-

"Rupees fifty for every rupees ten thousand or part thereof."

(xix) in Article 39,-

(a) in clause (a),-

(i) in sub-clause (1), in column (3), for the words "Rupees one thousand for each share", the words "Rupees Five thousand for each share.", shall be substituted;

(ii) in sub-clause (2), in column (3), for the words "Rupees five hundred for each share.", the words, "Rupees Three Thousand for each share." shall be substituted;

(b) in clause (b), in column (3), for the words "Rupees two hundred and fiftyfor each share", the words "Rupees One thousand for each share.", shall be substituted; and

(c) in clause (c), in column (3), for the words, "Rupees two hundred and fiftyfor each share", the words, "Rupees One thousand for each share.", shall be substituted.

(xx) in Article 40.-

(a) in clause (B), in sub-clause (a), in column (3), for the words "three percent", the words "five percent", shall be substituted;

(b) in clause (B), in sub-clause (b), in column (3), for the words "One thousand rupees", the words, "two thousand rupees", shall be substituted;

(c) in clause (C), in sub-clause (a), in column (3), for the words "three percent", the words "five percent", shall be substituted; and

(d) in clause (C), in sub-clause (b), in column (3), for the words "Onethousand rupees", the words "two thousand rupees", shall be substituted.

(xxi) in Article 40-A,-

(a) in clause (A),-

(i) in sub-clause (a), in column (3), for the words "One thousand rupees", the words "five thousand rupees", shall be substituted;

(ii) in sub-clause (b), for the entries in column (3), the following shall be substituted, namely:-

"Rupees Five thousand plus rupees one thousand for every rupees five lakhs or part thereof, exceeding rupees ten lakhs capital amount, subject to a maximum of rupees Twenty five lakhs."; and

(b) in clause (B), in column (3), for the words, "three percent", the words, "five percent", shall be substituted.

(xxii) in Article 41,-

(a) in clause (a), in column (3), for the words "one hundred rupees", the words "five hundred rupees", shall be substituted;

(b) in clause (b), in column (3), for the words, "one hundred rupees", the words "five hundred rupees", shall be substituted;

(c) in clause (c), in column (3), for the words, "one hundred rupees", the words "five hundred rupees", shall be substituted;

(d) in clause (d), in column (3), for the words, "two hundred

rupees", the words, "one thousand rupees", shall be substituted;

(e) in clause (f), in column (3), for the words "rupees fifty", the words "onehundred rupees", shall be substituted;

(f) in clause (g), in column (3), for the words, "rupees fifty", the words "one hundred rupees", shall be substituted; and

(g) in clause (h), in column (3), for the words, "two hundred rupees", the words, "five hundred rupees", shall be substituted.

(xxiii) in Article 44, in clause (b), in column (3), for the words "one hundred rupees", the words "two hundred rupees", shall be substituted.

(xxiv) in Article 45, in clause (c), in column (3), for the words " rupees one hundred", the words "rupees two hundred", shall be substituted.

(xxv) in Article 47,-

(a) in clause (a), in column (3), for the words "Fifty paise", the words "two rupees", shall be substituted; and

(b) in clause (b), in column (3), for the words, "rupees two hundred", the words, "rupees five hundred", shall be substituted.

(xxvi) in Article 51, in clause (b), in column (3), for the words, "one hundredrupees", the words "two hundred", shall be substituted.

(xxvii) in Article 52,-

(a) in clause (b), in sub-clause (ii), in column (3), for the words "one hundred rupees", the words "two hundred rupees", shall be substituted; and

(b) in clause (c), in column (3), for the words "one hundred rupees", the words "two hundred rupees", shall be substituted.

(xxviii) in Article 54,-

(a) in clause (i), in column (3), for the words, "Rupees One Thousand.", the words, "Rupees Two Thousand.", shall be substituted; and

(b) in clause (ii), in column (3), for the words, "Rupees One Thousand.", the words, "Rupees Two Thousand.", shall be substituted.

(xxix) after Article 55 the following shall be inserted, namely ; -

"56. if relating to bank guarantee,-

| | |
|---|---|
| (i) if relating to paper bank guarantee | Rupees three hundred |
| (ii) if relating to e-bank guarantee | Rupees two hundred |

By Order and in the name of
the Governor of Karnataka,

**(G. SRIDHAR)**
Secretary to Government
Department of Parliamentary
Affairs and Legislation